**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 179 ಶಿವಾನೀ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 21.11.2013.

**ಸುತ್ತೋಲೆ**

ವಿಷಯ: ಸರ್ಕಾರಿ ವಾಹನ ಅಪಘಾತಕ್ಕೀಡಾದಾಗ ದುರಸ್ಥಿಗೆ ಬಿಡುವ ಮುನ್ನ ಪಾಲಿಸಬೇಕಾದ ಮಾರ್ಗಸೂಚಿಗಳು.

---

ಸರ್ಕಾರಿ ವಾಹನ ಅಪಘಾತಕ್ಕೀಡಾದಾಗ ದುರಸ್ಥಿಗೆ ಬಿಡುವ ಮುನ್ನ ಈ ಕೆಳಕಂಡ ಅಂಶಗಳನ್ನು ಪಾಲಿಸಲು ಸೂಚಿಸಲಾಗಿದೆ:

1) ಸರ್ಕಾರಿ ವಾಹನ ಅಪಘಾಕ್ಕೀಡಾದ ತಕ್ಷಣ, ವಾಹನವು ಯಾರ ಮಾಲೀಕತ್ವದಲ್ಲಿ ನೋಂದಣಿಯಾಗಿರುತ್ತದೆಯೋ ಅವರಿಗೆ/ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ತಕ್ಷಣ ಮಾಹಿತಿ ನೀಡುವುದು.
2) ಸರ್ಕಾರಿ ವಾಹನ ಅಪಘಾತವಾದ ತಕ್ಷಣ ಸಂಬಂಧಿಸಿದ ಪೋಲೀಸ್ ಠಾಣೆಗೆ ದೂರು ನೀಡುವುದು.
3) ಸರ್ಕಾರಿ ವಾಹನಕ್ಕೆ ಅಪಘಾತದಿಂದ ಉಂಟಾಗಿರುವ ನಷ್ಟದ ಅಂದಾಜು ಮಾಡಲು ಸಂಬಂಧಿಸಿದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ತಿಳಿಸುವುದು.
4) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಗೆ ಅಪಘಾತಕ್ಕೆ ಸಂಬಂಧಿಸಿದಂತೆ ವಿಮೆ ಮೊತ್ತ ಪಾವತಿಸಲು ನಿಗದಿತ ನಮೂನೆಯಲ್ಲಿ ಪ್ರಸ್ತಾವನೆ ಕಳುಹಿಸುವುದು.
5) ಅಪಘಾತಕ್ಕೀಡಾದ ವಾಹನವನ್ನು ವಾಹನ ಉತ್ಪಾದಕ ಸಂಸ್ಥೆಯ ಅಧಿಕೃತ ಸರ್ವೀಸ್ ಸೆಂಟರ್/ಸರ್ಕಾರದ ಮಾನ್ಯತೆ ಪಡೆದಿರುವ ಖಾಸಗಿ ಗ್ಯಾರೇಜುಗಳಲ್ಲಿ ದುರಸ್ಥಿ ಮಾಡಿಸುವ ಮುನ್ನ ದುರಸ್ಥಿ ವೆಚ್ಚದ ವಿವರಗಳನ್ನು ಸಲ್ಲಿಸಿ, ಸದರಿ ದುರಸ್ಥಿ ವೆಚ್ಚಕ್ಕೆ ಸರ್ಕಾರದ ಪೂರ್ವಾನುಮೋದನೆ ಪಡೆಯತಕ್ಕದ್ದು.

ಮೇಲೆ ತಿಳಿಸಿರುವ ಯಾವುದೇ ಅಂಶಗಳನ್ನು ಪಾಲಿಸದೇ ಅಪಘಾತಕ್ಕೀಡಾದ ಸರ್ಕಾರಿ ವಾಹನವನ್ನು ದುರಸ್ಥಿ ಮಾಡಿಸಿದಲ್ಲಿ ಸಂಬಂಧಿಸಿದ ವಾಹನ ಚಾಲಕರು/ವಾಹನ ಹಂಚಿಕೆಯಾಗಿರುವ ಸಚಿವರು/ಅಧಿಕಾರಿಗಳನ್ನು ಈ ದುರಸ್ಥಿ ವೆಚ್ಚ ಪಾವತಿಸಲು ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

21/11

(ಎಸ್. ನಾಗರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.& ಆ.ಸು.ಇ. (ರಾಜ್ಯ ಶಿಷ್ಟಾಚಾರ).

21/11

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ 100 ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು.

..2..

**ಪ್ರತಿ:**

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲಾ ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
4. ವಿಶೇಷಾಧಿಕಾರಿಗಳು, ಕುಮಾರ ಕೃಪ ಅತಿಥಿ ಗೃಹ, ಹೈಗ್ರೌಂಡ್ಸ್, ಬೆಂಗಳೂರು-01.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಹಿಂಬರಹ

ಸಂಖ್ಯೆ: ಡಿಟಿಇ 05 ಎಟಿಎಸ್(2) 2013 ದಿನಾಂಕ: 18/12/2013

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ / ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಹಾಗೂ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಮತ್ತು ಚಾಲಕ ಸಿಬ್ಬಂದಿ ವರ್ಗದವರಿಗೆ ಸರ್ಕಾರದ ಸುತ್ತೋಲೆಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಜಂಟಿ ನಿರ್ದೇಶಕರು (ಎಟಿಎಸ್)

20/12/13

ಇವರಿಗೆ,

1) ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2) ನಿರ್ದೇಶನಾಲಯದ ಎಲ್ಲಾ ಅಧಿಕಾರಿ ವರ್ಗದವರಿಗೆ ಮಾಹಿತಿಗಾಗಿ.
3) ನಿರ್ದೇಶಕರ ಆಪ್ತಶಾಖೆಗೆ.
4) ನಿರ್ದೇಶನಾಲಯದ ಚಾಲಕ ಸಿಬ್ಬಂದಿಯವರಿಗೆ.
5) ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಜಾಲತಾಣದಲ್ಲಿ ಪ್ರಕಟಿಸಲು.